**KARNATAKA STATE RURAL DEVELOPMENT AND PANCHAYAT RAJ UNIVERSITY, GADAG**
*Raitha Bhavan, General Cariappa Circle, Gadag-582101, India*
*Phone: 08372-230338, Fax No.:08372-297343, e-mail: registrarksrdpru@gmail.com*
*Regional Office: Grameenabhivruddhi Bhavan, Ananda Rao Circle, Bengaluru-560009*

---

**ದಿನಾಂಕ:** 08.03.2019

## ಪತ್ರಿಕಾ ಪ್ರಕಟಣೆಗಾಗಿ

ದಿನಾಂಕ 08.03.2019 ರಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗಿನಲ್ಲಿ 'ಅಂತರಾಷ್ಟ್ರೀಯ ಮಹಿಳಾ ದಿನ' ವನ್ನು ಆಚರಿಸಲಾಯಿತು. ಶ್ರೀಮತಿ ರೇಣುಕಾ ಕುಲಕರ್ಣಿ, ಸಿವಿಲ್ ನ್ಯಾಯಾಧೀಶರು (ಹಿರಿಯ ಶ್ರೇಣಿ) ಮತ್ತು ಮೆಂಬರ್ ಸೆಕ್ರೆಟರಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಗದಗ ಇವರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಮಹಿಳೆಯರ ಶಿಕ್ಷಣದ ಪ್ರಾಮುಖ್ಯತೆ, ಕೀಳರಿಮೆಯನ್ನು ತೊರೆದು ಮಹಿಳೆಯರು ದೊರೆತ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕಾದ ಅವಶ್ಯಕತೆ, ಅಪಾರ ನಿರ್ವಹಣಾ ಕೌಶಲ್ಯವನ್ನು ಹೊಂದಿರುವ ಮಹಿಳೆಯರು ಅದನ್ನು ಸದುಪಯೋಗ ಪಡಿಸಿಕೊಂಡು ತಮ್ಮದೇ ಆದ ಉದ್ಯಮಗಳನ್ನು ಪ್ರಾರಂಭಿಸಿ ಆರ್ಥಿಕವಾಗಿ ಸಬಲವಾಗುವುದರೊಂದಿಗೆ,ಮತ್ತೊಬ್ಬರಿಗೆ ಪ್ರೇರಣೆಯಾಗಬೇಕೆಂದು ತಿಳಿಸಿದರು. ಯಾವುದೇ ವಿಷಯವಾದರೂ ಅದರ ಮಾಹಿತಿಯಿಲ್ಲದೆ ಅಭಿವೃದ್ಧಿಯನ್ನು ಸಾಧಿಸುವುದು ಅಸಾಧ್ಯ, ಆದುದರಿಂದ ಯಾವುದೇ ಕಾರ್ಯವನ್ನು ಸಾಧಿಸಬೇಕಾದರೆ ಅದರ ಬಗ್ಗೆ ಸಂಪೂರ್ಣ ಅರಿವನ್ನು ಹೊಂದಬೇಕು, ಮಹಿಳೆಯರಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಪ್ರಮುಖವಾಗಿ ಕಾನೂನುಗಳನ್ನು ಕುರಿತು ಮಾಹಿತಿಯ ಕೊರತೆಯಿದ್ದು, ಅದನ್ನು ನಿವಾರಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ಕ್ರಮಕೈಗೊಳ್ಳಬೇಕು, ಆ ಪ್ರಯತ್ನದಲ್ಲಿ ತಾವೂ ಕೈಜೋಡಿಸುವುದಾಗಿ ತಿಳಿಸಿದರು.



**'ಅಂತರಾಷ್ಟ್ರೀಯ ಮಹಿಳಾ ದಿನ' ಕುರಿತು ಮಾತನಾಡುತ್ತಿರುವ ಶ್ರೀಮತಿ ರೇಣುಕಾ ಕುಲಕರ್ಣಿ, ಸಿವಿಲ್ ನ್ಯಾಯಾಧೀಶರು (ಹಿರಿಯ ಶ್ರೇಣಿ) ಮತ್ತು ಮೆಂಬರ್ ಸೆಕ್ರೆಟರಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಗದಗ**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಶಿವಣ್ಣ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯ ರಂಗಗಳಲ್ಲಿ ಮಹಿಳೆಯರ ಸಬಲೀಕರಣ, ದೇಶದ ಅಭಿವೃದ್ಧಿಗೆ ಅತೀ ಅವಶ್ಯಕವಾದ ಅಂಶಗಳಾಗಿದ್ದು, ಅದಕ್ಕೆ ಪೂರಕವಾದ ವಾತಾವರಣವನ್ನು ಸರ್ಕಾರ ಹಾಗೂ ಸಮಾಜ ಒದಗಿಸಬೇಕಾಗಿದೆ ಎಂದು ತಿಳಿಸಿದರು. ಪಂಚಾಯತ್‌ಗಳಲ್ಲಿ ಮೀಸಲಾತಿ ಇರುವಂತೆ ವಿಧಾನಸಭೆ, ಲೋಕಸಭೆಗಳಲ್ಲೂ ಮೀಸಲಾತಿಗೆ ಅವಕಾಶವನ್ನು ಕಲ್ಪಿಸಬೇಕು, ಆಗ ಮಾತ್ರ ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ ಅನುಕೂಲವಾಗುತ್ತದೆಯೆಂದು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಇದರೊಂದಿಗೆ ಲಿಂಗ ತಾರತಮ್ಯ ತಡೆಗಟ್ಟುವ ನಿಟ್ಟಿನಲ್ಲೂ ಕ್ರಮ ಕೈಗೊಳ್ಳುವ ಅಗತ್ಯವಿದೆಯೆಂದು ತಿಳಿಸಿದರು. ವಿಶ್ವವಿದ್ಯಾಲಯದ, ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವಂದನೆಗಳೊಂದಿಗೆ,

ಕುಲಸಚಿವರು

ಗೆ,
ಸಂಪಾದಕರು,
ಮೇಲಿನ ಪ್ರಕಟಣೆಯನ್ನು ಸುದ್ದಿಯನ್ನಾಗಿ ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ವಿನಂತಿ.